KACM010006292020

Presented on : 07-03-2020
Registered on : 07-03-2020

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**SPL.C/36/2020**

Complainant(PROSECUTION):
State by Excise Police, Chikkamagaluru, rep.by P.P. CKM

**VERSUS**

Accused:
1. Onkarappa/Onkara S/o Lt.Siddegowda, 50 yrs, Agri., R/at Machenahalli V, Lakya H, CKM
2:Mallikarjuna S/o Lt.Siddegowda, 45 yrs, Agri., R/at Machenahalli V,Lakya H, CKM

--------------------------------------------------------------------------------

Sate Complainant}: Public Prosecutor, CKM,
Sri. B.M. LAXMANA GOWDA. appearing for A-1 and A-2

--------------------------------------------------------------------------------

**Offence punishable under : 13(1)(b),K.E.Act of KARNATAKA EXCISE ACT 1965,20(i),20(a),8(b),ofNDPS,Act of Narcotic Drugs and Psychotropic Substances (Amendment) Act, 2001,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**Spl.C. No: 36/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಂ.ಆರ್.ಶೇಖರ್ | ಪ್ರಾ.ಸಾ.- 04 |
| ತಂದೆ ಹೆಸರು | : | ಎಂ.ವಿ. ರಾಜು | ಚಾ.ಸಾ.- 06 |
| ವಯಸ್ಸು | : | 56 ವರ್ಷ | |
| ಉದ್ಯೋಗ | : | ಅಬಕಾರಿ ನಿರೀಕ್ಷಕರು,<br>ಎನ್. ಆರ್. ಪುರ ವಲಯ | |
| ವಾಸ ಸ್ಥಳ | : | ಎನ್ ಆರ್ ಪುರ | |

Spl.C. 36/2020, P.W.4

**<u>ದಿನಾಂಕಃ 21-08-2025</u>**

**<u>ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ -ಪಿ.ಪಿ.ಯವರಿಂದಃ</u>**

1. ನಾನು ಚಿಕ್ಕಮಗಳೂರು ವಲಯದಲ್ಲಿ ಸೆಪ್ಟೆಂಬರ್-2013 ರಿಂದ ಜೂನ್ -2022 ರವರೆಗೆ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 09-09-2019 ರಂದು ನಾನು ಚಿಕ್ಕಮಗಳೂರು ವಲಯ ಕಛೇರಿಯಲ್ಲಿದ್ದಾಗ, ಬೆಳಿಗ್ಗೆ ಸುಮಾರು 11.00 ಗಂಟೆಗೆ ಬಾತ್ಮಿದಾರರಿಂದ ಚಿಕ್ಕಮಗಳೂರು ತಾಲ್ಲೂಕಿನ, ಲಕ್ಯಾ ಹೋಬಳಿ, ಮಾಚೇನಹಳ್ಳಿ ಗ್ರಾಮದ ವಾಸಿ ಓಂಕಾರಪ್ಪ ಮತ್ತು ಮಲ್ಲಿಕಾರ್ಜುನ ಎಂಬುವವರ ಮನೆಯ ಹಿತ್ತಲಿನಲ್ಲಿ ಅಕ್ರಮವಾಗಿ ಗಾಂಜಾ ಬೆಳೆ ಬೆಳೆದಿದ್ದಾರೆಂದು ಮಾಹಿತಿ ಬಂದಿದ್ದು, ಮಾಹಿತಿ ಬಂದ ತಕ್ಷಣ ನಾನು, ನನ್ನ ಮೇಲಾಧಿಕಾರಿಯಾದ ಅಬಕಾರಿ ಉಪ ಅಧೀಕ್ಷಕರು, ಚಿಕ್ಕಮಗಳೂರು ವಿಭಾಗಕ್ಕೆ ತೆರಳಿ, ಮಾಹಿತಿ ಬಂದ ಬಗ್ಗೆ ತಿಳಿಸಿ, ದಾಳಿಯಲ್ಲಿ ಭಾಗವಹಿಸಬೇಕೆಂದು ಕೋರಿರುತ್ತೇನೆ.

3. ಅದರಂತೆ ಅಬಕಾರಿ ಉಪ ಅಧೀಕ್ಷಕರವರನ್ನು ಕರೆದುಕೊಂಡು, ಮಾಚೇನಹಳ್ಳಿ ಗ್ರಾಮಕ್ಕೆ ತೆರಳಿ, ಮಾಚೇನಹಳ್ಳಿ ಗ್ರಾಮದಲ್ಲಿ ಸ್ಥಳೀಯರಾದ ಇಬ್ಬರನ್ನು ಪಂಚರನ್ನಾಗಿ ಬರಲು ಕೇಳಿಕೊಂಡಾಗ, ಅವರು ನಿರಾಕರಿಸಿರುತ್ತಾರೆ. ನಂತರ ಅಲ್ಲಿಯೇ ಸ್ವಲ್ಪ ದೂರದಲ್ಲಿ ಗ್ರಾಮ ಪಂಚಾಯ್ತಿಗೆ ತೆರಳಿ ಗ್ರಾಮ ಪಂಚಾಯ್ತಿ ಸಿಬ್ಬಂದಿ ಬಿಲ್ ಕಲೆಕ್ಟರ್-ಚಾಸಾ-1 ಮತ್ತು ಪಿಡಿಓ ಚಾಸಾ-2 ರವರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿ, ಪಂಚರಾಗಿ ಸಹಕರಿಸಬೇಕೆಂದು ಕೇಳಿದಾಗ ಅವರು ಒಪ್ಪಿದ್ದು, ನಿ.ಪಿ.1 ಮತ್ತು 6 ರಂತೆ ನೋಟೀಸನ್ನು ಕೊಟ್ಟೆನು.

4. ನಂತರ, ಸಮಯದ ಕೊರತೆ ಇದ್ದುದರಿಂದ ಆರೋಪಿಯು ಸತ್ಯ ಮರೆ ಮಾಚುವ ಸಂಭವ ಇದ್ದುದರಿಂದ ಅಬಕಾರಿ ಕಾಯ್ದೆ ರೀತ್ಯಾ ಶೋಧನಾ ವಾರೆಂಟನ್ನು ತಯಾರಿಸಿ, ಪಂಚರು ಮತ್ತು ನಾವುಗಳು ಅಂಗಶೋಧನೆ ಮಾಡಿಕೊಂಡು ಮತ್ತು ವಾಹವನ್ನು ಪರಿಶೀಲಿಸಿಕೊಂಡು, ಪಂಚರೊಂದಿಗೆ ಹಾಗೂ ಸಲಕರಣೆಗಳೊಂದಿಗೆ ಅಂದರೆ ತೂಕದ ಯಂತ್ರ ಮತ್ತು ಟೇಪನ್ನು ತೆಗೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋದೆವು. ನಮ್ಮ ವಾಹನವನ್ನು ಆರೋಪಿತರ ಮನೆಯ 50 ಮೀಟರ್ ಹಿಂದೆ ನಿಲ್ಲಿಸಿದೆವು.

5. ಆರೋಪಿತರ ಮನೆಯ ಹಿಂಬದಿಯ ಹಿತ್ತಲಿನಲ್ಲಿ ಇಬ್ಬರು ವ್ಯಕ್ತಿಗಳು ನಿಂತು ಮಾತನಾಡುತ್ತಿದ್ದುದು ಕೇಳಿಸಿತು, ನಾವು ಅಲ್ಲಿಗೆ ಹೋದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಲು ಯತ್ನಿಸಿದರು, ಕೂಡಲೇ ಅವರನ್ನು ತಡೆದು ನಿಲ್ಲಿಸಿ, ವಿಚಾರಿಸಿ, ಅವರುಗಳ ಹೆಸರು ಮತ್ತು ವಿಳಾಸ ಕೇಳಲಾಗಿ ಅವರುಗಳು ಓಂಕಾರಪ್ಪ ಮತ್ತು ಮಲ್ಲಿಕಾರ್ಜುನ ಎಂದು ತಿಳಿಸಿದರು.

6. ಅವರುಗಳಿಗೆ ನಮಗೆ ಬಂದ ಮಾಹಿತಿಯನ್ನು ತಿಳಿಸಿದೆವು, ಅವರುಗಳು ಮಾಹಿತಿಯನ್ನು ನಿರಾಕರಿಸಿದರು. ಪಂಚರೊಂದಿಗೆ ಆರೋಪಿತರ ಮನೆ ಹಾಗೂ ಹಿತ್ತಲನ್ನು ಶೋಧನೆ ಮಾಡಬೇಕೆಂದು, ದಾಳಿ ಮಾಡಲಾಗಿ, ಹಿತ್ತಲಿನಲ್ಲಿ ಚೆಂಡು ಹೂವಿನ ಗಿಡಗಳನ್ನು ಬೆಳೆದಿದ್ದು, ಅವುಗಳ ಮಧ್ಯದಲ್ಲಿ ಕೆಲವು ಗಾಂಜಾ ಗಿಡಗಳು ಇದ್ದುದು ಕಂಡು ಬಂದವು. ಅವುಗಳನ್ನು ಪರೀಕ್ಷಿಸಲಾಗಿ ಒಟ್ಟು 8 ಗಾಂಜಾ ಗಿಡಗಳು ಹೂ ಮತ್ತು ತೆನೆಗಳಿಂದ ಕೂಡಿದ ಹಸಿ ಗಾಂಜಾ ಗಿಡಗಳು ಆಗಿರುತ್ತವೆ. ಅವುಗಳನ್ನು ಬೇರು ಸಮೇತ ಕಿತ್ತು ಅವುಗಳಿಗೆ ಕ್ರ.ಸಂ.1 ರಿಂದ 8 ಎಂದು ನೀಡಲಾಯಿತು. ಅವುಗಳನ್ನು ಅಳತೆ ಮಾಡಿದಾಗ, ಅವುಗಳು ಬೇರೆ ಬೇರೆ ಸೆಂ ಮೀ ಗಳ ಅಳತೆಯಲ್ಲಿ ಇದ್ದವು. ಅವುಗಳನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಒಟ್ಟು 17 ಕೆ.ಜಿ. 350 ಗ್ರಾಂ ತೂಕ ಇತ್ತು.

7. ಆರೋಪಿತರಿಗೆ ಇವುಗಳನ್ನು ಯಾವ ಉದ್ದೇಶಕ್ಕಾಗಿ ಬೆಳೆಸಿದ್ದೀರಾ ಎಂದು ಕೇಳಲಾಗಿ, ಇವುಗಳನ್ನು ಮಾರಾಟ ಮಾಡುವ ಉದ್ದೇಶಕ್ಕಾಗಿ ಬೆಳೆಸಿರುತ್ತೇವೆಂದು ತಿಳಿಸಿದರು. ಆರೋಪಿತರಿಗೆ ಸದರಿ ಗಿಡಗಳನ್ನು ಬೆಳೆಯುವುದು ಅಪರಾಧವೆಂದು ತಿಳಿಸಿ, ವಶಪಡಿಸಿಕೊಂಡಂತಹ ಗಾಂಜಾ ಗಿಡಗಳನ್ನು 3 ಭಾಗಗಳನ್ನಾಗಿ ಮಾಡಿ, ಪ್ಲಾಸ್ಟಿಕ್ ಚೀಲಕ್ಕೆ ಹಾಕಿ, ದಾರದಿಂದ ಕಟ್ಟಿ, ಅರಗಿನ ಸಹಾಯದಿಂದ ಇಲಾಖಾ ಮೊಹರು ಮಾಡಿ ಸೀಲು ಮಾಡಲಾಯಿತು. ಮಾದರಿ ಚೀಟಿಗಳನ್ನು ತಯಾರಿಸಿ, ಪಂಚರ ಸಹಿಗಳನ್ನು ಪಡೆದು, ಚೀಲಗಳಿಗೆ ಅಂಟಿಸಲಾಯಿತು.

8. ಅಲ್ಲಿ ನಡೆದಂತಹ ಎಲ್ಲಾ ಪ್ರಕ್ರಿಯೆಗಳ ವೀಡಿಯೋ ಮತ್ತು ಛಾಯಾಚಿತ್ರಗಳನ್ನು ತೆಗೆಯಲಾಯಿತು. ಸ್ಥಳದ ಚೆಕ್ಕು ಬಂದಿಃ-ಪೂರ್ವಕ್ಕೆಃ ರಂಗಸ್ವಾಮಿಯವರ ಮನೆ, ಪಶ್ಚಿಮಕ್ಕೆಃಸಿದ್ದಯ್ಯರವರ ಮನೆ, ಉತ್ತರಕ್ಕೆಃ ನೀರಿನ ಕಾಲುವೆ, ದಕ್ಷಿಣಕ್ಕೆಃ ಆರೋಪಿತರ ಮನೆ ಇರುತ್ತದೆ. ಸದರಿ ಸ್ಥಳದಲ್ಲಿ ಮಧ್ಯಾಹ್ನ 1.00 ರಿಂದ 3.00 ಗಂಟೆಯವರೆಗೂ ನಿ.ಪಿ.2 ರಂತೆ ಮಹಜರ್ ಕ್ರಮ ಜರುಗಿಸಲಾಯಿತು. ನಿ.ಪಿ.2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು.

9. ನಂತರ ದೊರೆತ ಸ್ವತ್ತುಗಳನ್ನು ವಶಪಡಿಸಿಕೊಂಡು ಆರೋಪಿತರನ್ನು ಮುಂದಿನ ಕ್ರಮಕ್ಕಾಗಿ ದಸ್ತಗಿರಿ ಮಾಡಿಕೊಂಡು ಬಂದೆವು. ಅಬಕಾರಿ ನಿರೀಕ್ಷಕರ ಮೊಬೈಲ್ ನಿಂದ ಕೃತ್ಯ ನಡೆದ ಸ್ಥಳದ ಫೋಟೋಗಳನ್ನು ತೆಗೆದಿರುತ್ತೇವೆ. ನಿ.ಪಿ.3 ರಿಂದ 5 ಮತ್ತು 7 ಎಂದು ಗುರುತಿಸಲಾದ ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

10. ಆರೋಪಿತರ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಶೋಧನಾ ವಾರೆಂಟನ್ನು ನಿ.ಪಿ.9 ಎಂದು ಗುರುತಿಸಲಾಯಿತು. ಸ್ವ ಪಿರ್ಯಾದನ್ನು

ತಯಾರಿಸಲಾಗಿದ್ದು, ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿ.ಪಿ. 11 ಎಂದು ಗುರುತಿಸಲಾಯಿತು.

11. ಅದೇ ದಿನ, ಚಾಸಾ-1 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆಯಲಾಯಿತು.

12. ದಿನಾಂಕಃ 12-09-2019 ರಂದು ಮ್ಯಾಜಿಸ್ಟ್ರೇಟ್ ರವರ ಮುಂದೆ ಇನ್ವೆಂಟ್ರಿಗೆ ಹಾಜರುಪಡಿಸಲಾದ ಗಾಂಜಾ ಗಿಡಗಳ ಪೈಕಿ, ರಾಸಾಯನಿಕ ಪರೀಕ್ಷೆಗಾಗಿ 4 ಕೆ.ಜಿ. 100 ಗ್ರಾಂ.ನಷ್ಟು ಗಾಂಜಾವನ್ನು ಪ್ರತ್ಯೇಕವಾಗಿ ತೆಗೆಯಲಾಯಿತು. ಈ ಬಗ್ಗೆ ನ್ಯಾಯಾಯದ ಪ್ರಮಾಣ ಪತ್ರವನ್ನು ನಿ.ಪಿ.12 ಎಂದು ಗುರುತಿಸಲಾಯಿತು. ನ್ಯಾಯಾಲಯದ ಸ್ಯಾಂಪಲ್ ಸೀಲನ್ನು ನಿ.ಪಿ.13 ಎಂದು ಗುರುತಿಸಲಾಯಿತು. ನ್ಯಾಯಾಲಯದ ಅನೆಕ್ಷರ್-1 ಮತ್ತು 2 ನ್ನು ಕ್ರಮವಾಗಿ ನಿ.ಪಿ. 14 ಮತ್ತು ನಿ.ಪಿ.15 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ವೇಳೆ ಆಗಿದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-21-08-2025
(ರಾಜೇಶ್ವರಿ ಎನ್ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

Visit **ecourts.gov.in** for updates or download mobile app "**eCourts Services**" from Android or iOS